ಈ ದಿನ ದಿನಾಂಕಃ 14-02-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀಃ ಕೆ.ಜಿ.ಎಸ್ ರವರಿಂದಃ</u>

ಈ ದಾವೆಯ ಮಾಹಿತಿ ನನಗೆ ಇದೆ . ನಿ ಪಿ 1 ರಂತೆ ದಾವಾ ಆಸ್ತಿಯನ್ನು ವಾದಿಯ ತಂದೆಯವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ . ವಾದಿಯ ತಂದೆಯವರಿಗೆ ವಾದಿ ಒಬ್ಬನೇ ಮಗ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಅವರಿಗೆ 5 ಜನ ಹೆಣ್ಣು ಮಕ್ಕಳಲ್ಲಿ 3 ಜನ ಜೀವಂತ ಇದ್ದು, ಇಬ್ಬರು ಮರಣಹೊಂದಿರುತ್ತಾರೆ ಎಂದು ನುಡಿಯುತ್ತಾರೆ . ಅವರುಗಳು ತಮ್ಮ ತಮ್ಮ ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ಐದು ಜನ ಹೆಣ್ಣು ಮಕ್ಕಳ ಹೆಸರು ಷರೀಫಾ ಬೀ, ಸಫುರಾ ಬೀ ಕೋಂ ಹಸೇನ್ ಸಾಬ್, ಜೈರುನ್ ಬೀ ಕೋಂ ಅನ್ವರ್ ಸಾಬ್, ನೂರ್ ಜಾನ್ ಕೋಂ ಗೌಸ್ ಸಾಬ್ , ಶರ್ಫುನ್ ಬೀ.

ಷರೀಫಾ ಬೀ, ನೂರ್ ಜಾನ್ ಕೋಂ ಗೌಸ್ ಸಾಬ್ ರವರು ಹಾಗೂ ಅವರ ಗಂಡಂದಿರು ಮರಣ ಹೊಂದಿರುತ್ತಾರೆ. ಅವರ ಮಕ್ಕಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯ ತಂದೆಯವರಿಗೆ ವಾದಿ ಬಿಟ್ಟು ಬೇರೆ ಯಾವುದೇ ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾಸ್ತಿಯನ್ನು ವಾದಿ ಮತ್ತು ವಾದಿಯವರ ತಂದೆಯಾಗಲೀ ನೊಂದಾಯಿತ ಕ್ರಯಪತ್ರದ ಮೂಲಕ ಪರಭಾರೆ ಮಾಡಿರುವುದಿಲ್ಲ ಎಂದರೆ ಸರಿ. ದಾವಾಆಸ್ತಿಯನ್ನು ವಾದಿ ಮತ್ತು ವಾದಿಯವರ ತಂದೆಯವರಿಗೆ ಗೊತ್ತಾಗದ ರೀತಿ ಖಾತೆ ಬದಲಾವಣೆಯನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಸದರಿ ವಿಚಾರವಾಗಿ ವಾದಿಯವರು ಅಕ್ರಮವಾಗಿ ಖಾತೆ ಬದಲಾವಣೆ ಮಾಡಿದ ಬಗ್ಗೆ ಗ್ರಾಮ ಪಂಚಾಯಿತಿಯವರಿಗೆ ಅರ್ಜಿಯನ್ನು ನೀಡಿ ಕ್ರಯಪತ್ರದಂತೆ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿ ಎಂದು ಕೋರಿರುತ್ತಾರೆ ಎಂದರೆ ಸರಿಯಲ್ಲ . ಗ್ರಾಮ ಪಂಚಾಯಿತಿಯವರು ಅವರಿಗೆ ಇದು ಸಿವಿಲ್ ವ್ಯಾಜ್ಯವಾಗಿರುವುದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ . ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಂಚಾಯಿತಿ ದಾಖಲೆಗಳನ್ನು ಹೊರತು ಪಡಿಸಿ ಬೇರೆ ಯಾವುದೇ

ನೊಂದಾಯಿತಿ ದಾಖಲೆಗಳು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ತಂಗಿಯವರನ್ನು ವಾದಿಯ ತಂದೆಯವರಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಾವು ಮತ್ತು ವಾದಿಯವರ ನಡುವಿನ ಸಂಬಂಧ ಚೆನ್ನಾಗಿತ್ತು ಎಂದರೆ ಸರಿ. ನಿಡಿ 1 ನ್ನು ವಾದಿಯ ತಂದೆಯವರು ಕೊಂಡು ಕೊಂಡಂತಹ ಆಸ್ತಿ ಎಂದರೆ ಸರಿ.

ನಮ್ಮ ತಂದೆ ಹೊನ್ನಾಳಿ ತಾಲ್ಲೂಕು, ಹನುಮನಹಳ್ಳಿ ಗ್ರಾಮಸ್ಥರು ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಯವರು ಮಾರಾಟ ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿ. ವಾದಿಯ ಆಸ್ತಿಗೆ ಒಂದು ಚದರ ಅಡಿಗೆ ಎಷ್ಟು ಬೆಲೆ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ . ನಮ್ಮ ಊರಿನಲ್ಲಿ ಒಂದೊಂದು ಆಸ್ತಿಗೆ ಒಂದೊಂದು ಬೆಲೆ ಇದೆ ಎಂದರೆ ಸರಿ . ನಿಡಿ 3 ರಂತೆ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯ ಐದು ಲಕ್ಷಕ್ಕೂ ಮೀರುತ್ತದೆ ಎಂದು ಹೇಳಿದ್ದು, ದಾಖಲೆ ಪ್ರಕಾರ ಅಷ್ಟು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಡಿ 3 ರಲ್ಲಿ 2016-17 ನೇ ಸಾಲಿನ ಮಾರುಕಟ್ಟೆ ಮೌಲ್ಯ ರೂಃ 1080 ಎಂದು ನಮೂದು ಇದೆ ಎಂದರೆ ಸರಿ. ಆದರೆ ಎಷ್ಟು ಚದರ ಮೀಟರ್ ಗೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ತಳ್ಳಿಹಾಕಲು ನ್ಯಾಯಾಲಯದ ಆರ್ಥಿಕ ವ್ಯಾಪ್ತಿಗೆ ಬರದಿದ್ದರೂ ಸಹ ಕಾಲಹರಣ ಮಾಡುವ ಉದ್ದೇಶದಿಂದ ನಿಡಿ 3 ರ ದಾಖಲೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಳತೆಯನ್ನು ನಿಖರವಾಗಿ ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಇ-ಸ್ವತ್ತಿನ ದಾಖಲಾತಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ . 2016-17 ನೇ ಸಾಲಿಗೆ ಸಂಬಂಧಿಸಿದಂತೆ ದಾವಾ ಆಸ್ತಿಯ ಅಳತೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ .

**ಮರುವಿಚಾರಣೆ ಇರುವುದಿಲ್ಲ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.